ದಿಃ 18.06.2026

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

– ಪಾಟೀ ಸವಾಲು – ಆರೋಪಿಯ ಪರ – ಶ್ರೀಮತಿ ಕೆ.ಎಸ್.ಆರ್. ವಕೀಲರಿಂದ –

ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಘಟನೆ ನಡೆಯಿತೆಂದು ಹೇಳಿದ ಇಂಜಿನಿಯರಿಂಗ್ ಕಾಲೇಜಿನ ಬಳಿ ಯಾವಾಗಲೂ ಸಾಕಷ್ಟು ಜನರು ಓಡಾಡುತ್ತಿರುತ್ತಾರೆ ಎಂದರೆ ಸರಿ. ಘಟನೆ ನಡೆಯಿತೆಂದು ಹೇಳಿದ ಸಮಯದಲ್ಲಿ ಸಂಜೆ 7.00 ಗಂಟೆಯಾಗಿತ್ತೆಂದು ಹೇಳಿದ್ದು, ಆ ಕಾರಣ ಆ ಸ್ಥಳದಲ್ಲಿ ಆ ವೇಳೆಗೆ ಕತ್ತಲು ಇತ್ತು ಎಂದರೆ ಸರಿ. ಸದರಿ ಸ್ಥಳದಲ್ಲಿ ಕತ್ತಲು ಇದ್ದ ಕಾರಣ ಘಟನೆ ನಡೆಯಿತೆಂದು ಹೇಳಿದಾಗ ನನಗೆ ಮತ್ತು ಚಾಸಾ–1, 2 ಮತ್ತು 4 ಇವರಿಗೆ ಯಾರು ಅವಾಚ್ಯ ಶಬ್ದಗಳಿಂದ ಬೈದರೆಂದು ನನಗೆ ತಿಳಿಯಲಿಲ್ಲವೆಂದರೆ ಸರಿ. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಘಟನೆ ನಡೆಯಿತೆಂದು ಹೇಳಿದಾಗ ನನಗೆ ಮತ್ತು ಚಾಸಾ–2 ಇವರಿಗೆ ಯಾರು ಚಾಕುವಿನಿಂದ ಹಲ್ಲೆ ಮಾಡಿ ಗಾಯಗೊಳಿಸಿದರೆಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಮತ್ತು ಆ ವೇಳೆಗೆ ನನಗೆ ಮತ್ತು ಚಾಸಾ–2 ಇವರಿಗೆ ಚಾಕುವಿನಿಂದ ಯಾರು ಹಲ್ಲೆ ಮಾಡಿದರೆಂದು ಗೊತ್ತಾಗಲಿಲ್ಲವೆಂದರೆ ಸರಿ. ಸದರಿ ಘಟನೆ ನಡೆಯಿತೆಂದು ಹೇಳಿದಾಗ ಚಾಸಾ–1 ಮತ್ತು 4 ಇವರನ್ನು ಯಾರು ನೂಕಿದರೆಂದು ನನಗೆ ಗೊತ್ತಾಗಲಿಲ್ಲವೆಂದರೆ ಸರಿ.

2) ನಮ್ಮ ಮತ್ತು ಆರೋಪಿಯ ಮಧ್ಯೆ ನಡೆಯಿತೆಂದು ಹೇಳಿದ ಘಟನೆಯ ಬಗ್ಗೆ ಪೋಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ ಮತ್ತು ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಆರೋಪಿಯ ವಿರುದ್ಧ ಕೊಟ್ಟಿಲ್ಲವೆಂದರೆ ಸರಿ. ಎಂಓ–1 ಎಂದು ಗುರುತಿಸಿದ ಕಟರ್ ನ್ನು ನಾನು ಈ ಹಿಂದೆ ನ್ಯಾಯಾಲಯದಲ್ಲಿ ಸಾಕ್ಷಿ ಕೊಡುವಾಗ ಅದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುವೆನು ಎಂದರೆ ಸರಿ. ಆರೋಪಿಯು ನನಗೆ ಯಾವುದೇ ದಿನದಂದು ಚಾಕುವಿನಿಂದ ಕುತ್ತಿಗೆಯ ಮುಂಭಾಗಕ್ಕೆ ಹಲ್ಲೆ ಮಾಡಿರುವುದಿಲ್ಲ ಮತ್ತು ಗಾಯಗೊಳಿಸಿರುವುದಿಲ್ಲ ಎಂದರೆ ಸರಿ.

3) ಮುಖ್ಯವಿಚಾರಣೆಯಲ್ಲಿ ಹೇಳಿದ ಅಂಶಗಳನ್ನು ನಾನು ಪೋಲೀಸರು ಹೇಳಿಕೊಟ್ಟಿದ್ದಕ್ಕೆ ಅನುಗುಣವಾಗಿ ನ್ಯಾಯಾಲಯದಲ್ಲಿ ಈ ಹಿಂದೆ ಸಾಕ್ಷಿ ಹೇಳಿರುವೆನು ಎಂದರೆ ಸರಿ. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಆರೋಪಿಯು ನನಗೆ ಮತ್ತು ಚಾಸಾ–1, 2 ಮತ್ತು 4 ಇವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಆತನು ನನಗೆ ಮತ್ತು ಚಾಸಾ–2 ಇವರಿಗೆ ಚಾಕುವಿನಿಂದ ಇರಿದು ಗಾಯಗೊಳಿಸಿರುವುದಿಲ್ಲ ಮತ್ತು ಆರೋಪಿಯು ಚಾಸಾ–1 ಮತ್ತು 4 ಇವರನ್ನು ನೂಕಿರುವುದಿಲ್ಲವೆಂದರೆ ಸರಿ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ಮುಖ್ಯವಿಚಾರಣೆಯಲ್ಲಿ ಅಭಿಯೋಜನೆಯ ಪರ ಸಾಕ್ಷಿ ನೀಡಿದ್ದು, ಆದರೆ ಪಾಟೀ ಸವಾಲಿನಲ್ಲಿ ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನೀಡಿದ್ದು, ಆ ಕಾರಣ ಸಾಕ್ಷಿಯನ್ನು ಮರುವಿಚಾರಣೆ ಮಾಡಲು ಅನುಮತಿ ಕೋರುತ್ತಿದ್ದು, ಸಾಕ್ಷಿಯ ಮುಖ್ಯವಿಚಾರಣೆ ಮತ್ತು ಪಾಟೀ ಸವಾಲನ್ನು ಪರಿಶೀಲಿಸಿ ಸರ್ಕಾರಿ ಅಭಿಯೋಜಕರಿಗೆ ಸಾಕ್ಷಿಯ ಮರುವಿಚಾರಣೆ ಮಾಡಲು ಅನುಮತಿ**

**ನೀಡುವುದು ಸೂಕ್ತವೆಂದು ಕಂಡು ಬಂದಿದ್ದು, ಕಾರಣ ಸಾಕ್ಷಿಯನ್ನು ಮರು ವಿಚಾರಣೆ ಮಾಡಲು ಅನುಮತಿ ನೀಡಲಾಗಿದೆ).**

**ಮರು ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಹಾಲಿ ನಾನು ಮತ್ತು ಚಾಸಾ–1, 2 ಮತ್ತು 4 ಕೂಡಿಕೊಂಡು ಆರೋಪಿಯೊಂದಿಗೆ ಕೇಸನ್ನು ರಾಜೀ ಮಾಡಿಕೊಂಡಿರುವೆವು ಎಂದರೆ ಸರಿ. ದಿಃ 18.12.2025 ರಂದು ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯವಿಚಾರಣೆಯ ಸಾಕ್ಷಿಯನ್ನು ನೀಡಿದ್ದು, ಆ ವೇಳೆಗೆ ನಾನು ನುಡಿದ ಸಾಕ್ಷಿಯು ನಿಜವಿದ್ದು, ಆದರೆ ಈಗ ನಾವು ಆರೋಪಿಯೊಂದಿಗೆ ಕೇಸನ್ನು ರಾಜಿ ಮಾಡಿಕೊಂಡ ಕಾರಣ, ನನಗೆ ಈಗ ಘಟನೆಯ ಬಗ್ಗೆ ಏನೂ ಗೊತ್ತಿಲ್ಲವೆಂದು ಮತ್ತು ನಾನು ಘಟನೆಯ ಬಗ್ಗೆ ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲವೆಂದು ಹಾಗೂ ಆರೋಪಿಯು ನನಗೆ ಹಾಗೂ ಚಾಸಾ–1, 2 ಮತ್ತು 4 ಇವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲವೆಂದು ಹಾಗೂ ಆತನು ನನಗೆ ಮತ್ತು ಚಾಸಾ–2 ಇವರಿಗೆ ಚಾಕುವಿನಿಂದ ಇರಿದು ಗಾಯಗೊಳಿಸಿಲ್ಲವೆಂದು ಮತ್ತು ಆತನು ಚಾಸಾ–1 ಮತ್ತು 4 ಇವರನ್ನು ನೂಕಿರುವುದಿಲ್ಲವೆಂದು ಈಗ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿರುವೆನು ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದು, ಆದರೂ ಕೂಡ ಈಗ ಆರೋಪಿಯೊಂದಿಗೆ ನಾವು ರಾಜೀ ಮಾಡಿಕೊಂಡ ಕಾರಣ ಈಗ ನನಗೆ ಏನೂ ಗೊತ್ತಿಲ್ಲವೆಂದು ನ್ಯಾಯಾಲಯದಲ್ಲಿ ನಾನು ಸುಳ್ಳು ಹೇಳುತ್ತಿರುವೆನು ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿತ್ರದುರ್ಗ.